ಈ ಲೇಖನದ ವಿಷಯಾನುಕ್ರಮಣಿಕೆ


ಅಕ್ಷಯ ತೃತೀಯಾ 2

ಎಂದು ಆಚರಿಸಬೇಕು? 5

ವಿಶೇಷ ಯೋಗಗಳು 6

ಕೊಳ್ಳುವದರ ಉಲ್ಲೇಖ ಶಾಸ್ತ್ರದಲ್ಲಿಲ್ಲ 8

ಗಂಗಾಸ್ನಾನದಿಂದ ಸರ್ವಪಾಪವಿನಾಶ 10

ಸಮುದ್ರಸ್ನಾನದಿಂದ ಗೋದಾನ-ಭೂದಾನಗಳ ಫಲ 11

ಪುಷ್ಪಾರ್ಚನೆ ಧೂಪಸಮರ್ಪಣೆ 13

ಗಂಧಸಮರ್ಪಣೆಯಿಂದ ಹರಿಲೋಕಪ್ರಾಪ್ತಿ 15

ಉದಕುಂಭದಾನದಿಂದ ಪಿತೃಗಳಿಗೆ ಅಕ್ಷಯತೃಪ್ತಿ 18

ತಿಲತರ್ಪಣ ಮತ್ತು ತಿಲಕುಂಭದಾನ 20

ಬ್ರಾಹ್ಮಣ ಸಮಾರಾಧನೆ 21

ಗ್ರಂಥದಾನ, ಶಾಸ್ತ್ರಾಧ್ಯಯನ 21

## ಅಕ್ಷಯ ತೃತೀಯಾ

ವೈಶಾಖಮಾಸದ ಶುಕ್ಲಪಕ್ಷದ ತೃತೀಯಾಕ್ಕೆ ಅಕ್ಷಯತೃತೀಯಾ ಎಂದು ಹೆಸರು.

**ವೈಶಾಖಸ್ಯ ಸಿತೇ ಪಕ್ಷೇ**
**ತೃತೀಯಾಽಕ್ಷಯಸಂಜ್ಞಿತಾ**

ಎಂದು ಸ್ಕಂದಪುರಾಣ ತಿಳಿಸುತ್ತದೆ. ಅಂದು ಮಾಡುವ ಸಕಲ ಸತ್ಕರ್ಮಗಳ ಫಲ ಎಂದಿಗೂ ಕ್ಷಯವಾಗುವದಿಲ್ಲ. ಅನಂತವಾಗುತ್ತದೆ. ಹೀಗಾಗಿ ಈ ತಿಥಿಗೆ ಅಕ್ಷಯ ತೃತೀಯಾ ಎಂದು ಹೆಸರಿದೆ ಎಂದು ಶಾಸ್ತ್ರ ತಿಳಿಸುತ್ತದೆ –

**ವೈಶಾಖೇ ಮಾಸಿ ರಾಜೇಂದ್ರ**
**ಶುಕ್ಲಪಕ್ಷೇ ತೃತಿಯಕಾ**
**ಅಕ್ಷಯಾ ಸಾ ತಿಥಿಃ ಪ್ರೋಕ್ತಾ**
**ಕೃತ್ತಿಕಾ-ರೋಹಿಣೀ-ಯುತಾ**

**ತಸ್ಯಾಂ ದಾನಾದಿಕಂ ಸರ್ವಂ**
**ಅಕ್ಷಯಂ ಸಮುದಾಹೃತಮ್**

ಈ ದಿನದಂದು ಮಾಡುವ ತನಗಾಗಿ ಮಾಡುವ ಸ್ನಾನ, (ಉಪವಾಸ[1]) ದೇವರಿಗೆ, ಗುರುಗಳಿಗೆ ಸಲ್ಲಿಸುವ ಪೂಜೆ, ಪುಷ್ಪಾರ್ಚನೆ, ಗಂಧಸಮರ್ಪಣೆ, ಪಿತೃಗಳಿಗಾಗಿ ತಿಲತರ್ಪಣ, ಶ್ರಾದ್ಧ, ಬ್ರಾಹ್ಮಣಸಮಾರಾಧನೆ, ದಾನ ಎಲ್ಲವೂ ಅಕ್ಷಯಫಲವನ್ನು ನೀಡುತ್ತವೆ.

ಅಕ್ಷಯಫಲದಾಯಕವಾದ ಈ ತಿಥಿಯನ್ನು ದೇವತೆಗಳೂ ಸಹ ಶ್ಲಾಘಿಸುತ್ತಾರೆ ಎಂದು ಭವಿಷ್ಯಪುರಾಣ ತಿಳಿಸುತ್ತದೆ —

**ಯಾ ಶುಕ್ಲಾ ಕುರುಶಾರ್ದೂಲ**
**ವೈಶಾಖೇ ಮಾಸಿ ವೈ ತಿಥಿಃ ।**

**ತೃತೀಯಾ ಸಾಕ್ಷಯಾ ಲೋಕೇ**

---

[1] ಅಕ್ಷಯತೃತೀಯಾ ದಿವಸ ಉಪವಾಸವೂ ವಿಹಿತ. ಮಾಡಲೇಬೇಕೆಂದಿಲ್ಲ. ಮಾಡಿದಲ್ಲಿ ಅಕ್ಷಯಫಲ. ಉಪವಾಸ ಮಾಡಬೇಕಾದರೆ ದ್ವಿತೀಯಾವಿದ್ಧವಾದ ತೃತೀಯಾದಂದು ಸರ್ವಥಾ ಮಾಡಬಾರದು. ಚತುರ್ಥೀಯುಕ್ತವಾದ ತೃತೀಯಾ ಅಥವಾ, ಶುದ್ಧ ತೃತೀಯಾದಂದು ಮಾಡಬೇಕು.

**ತ್ರಿದಶೈರಭಿವಂದಿತಾ ।।**

ನಾವು ಮಾಡುವ ಕರ್ಮಗಳಿಗೆ ಅನಂತಫಲವನ್ನು ಅಥವಾ ಅಕ್ಷಯಫಲವನ್ನು ನೀಡುವ ಸಾಮರ್ಥ್ಯ ದೇವತೆಗಳಿಗಿಲ್ಲ. **ಅಂತವತ್ತು ಫಲಂ ತೇಷಾಮ್** ಎಂದು ಗೀತೆ ನಿರ್ಣಯಿಸಿದೆ.

ಅಕ್ಷಯತೃತೀಯಾ ಅನಂತಫಲವನ್ನು ನೀಡುತ್ತದೆ ಎಂದರೆ ಶ್ರೀಹರಿ ಈ ತಿಥಿಗೆ ವಿಶೇಷರೂಪದಿಂದ ನಿಯಾಮಕನಾಗಿದ್ದಾನೆ ಎನ್ನುವದು ನಿರ್ಣೀತ. ವಿಶೇಷ ಅಂಶಗಳನ್ನು ಪುರಾಣಗಳಿಂದ ಸಂಶೋಧಿಸಿ ತಿಳಿಯಬೇಕು.

## ಎಂದು ಆಚರಿಸಬೇಕು?

ಅಕ್ಷಯತೃತೀಯಾವನ್ನು ಆಚರಿಸಬೇಕಾದರೆ ಪೂರ್ವಾಹ್ಣವ್ಯಾಪಿನಿಯಾದ ತಿಥಿಯನ್ನೇ ಅಚರಿಸಬೇಕು.

ಸೂರ್ಯೋದಯದ ಕಾಲದಲ್ಲಿ ಎಂದು ತೃತೀಯಾ ಇದೆಯೋ ಅಂದೇ ಅಕ್ಷಯತೃತೀಯಾ ಅಚರಿಸಬೇಕು.

ಎರಡು ದಿವಸಗಳಲ್ಲಿ ತೃತೀಯಾ ಇದ್ದಾಗ ಮೊದಲನೆಯ ತೃತೀಯಾ ಬಿಟ್ಟು ಎರಡನೆಯ ತೃತೀಯಾವನ್ನೇ ಗ್ರಹಿಸಬೇಕು.

ದಶಮೀವಿದ್ಧವಾದ ಏಕಾದಶಿಯನ್ನು ತ್ಯಜಿಸುವಂತೆ ದ್ವಿತೀಯಾವಿದ್ಧವಾದ ತೃತೀಯಾವನ್ನು ತ್ಯಜಿಸಬೇಕು. ಚತುರ್ಥೀಯುಕ್ತವಾದ ತೃತೀಯಾ ಪರಮಶ್ರೇಷ್ಠ.

## ವಿಶೇಷ ಯೋಗಗಳು

ಅಕ್ಷಯತೃತೀಯಾದಂದು ಕೃತ್ತಿಕಾ ರೋಹಿಣೀ ನಕ್ಷತ್ರಗಳಿದ್ದರೆ ತುಂಬ ಶ್ರೇಷ್ಠ.

ರೋಹಿಣೀ ನಕ್ಷತ್ರ ಜೊತೆಯಲ್ಲಿ ಬುಧವಾರ ಅಥವಾ ಸೋಮವಾರ ಸೇರಿದರೆ ಮತ್ತಷ್ಟು ಶ್ರೇಷ್ಠ.

ಕೃತ್ತಿಕಾ, ರೋಹಿಣೀ, ಬುಧವಾರಗಳು ಬಂದಿದ್ದರೂ, ದ್ವಿತೀಯಾವಿದ್ಧವಾದ ತೃತೀಯಾವನ್ನು ಸರ್ವಥಾ ಆಚರಿಸಬೇರಾದು.

ನಾರದೀಯ ಪುರಾಣ ಇಷ್ಟೆಲ್ಲ ವಿಷಯಗಳನ್ನು ತಿಳಿಸುತ್ತದೆ —

**ವೈಶಾಖೇ ಶುಕ್ಲಪಕ್ಷೇ ತು**
**ತೃತೀಯಾ ರೋಹಿಣೀಯುತಾ**
**ದುರ್ಲಭಾ ಬುಧವಾರೇಣ**
**ಸೋಮೇನಾಪಿ ಯುತಾ ತಥಾ**

**ರೋಹಿಣೀ ಬುಧಯುಕ್ತಾಪಿ**
**ಪೂರ್ವವಿದ್ಧಾ ವಿವರ್ಜಿತಾ**

**ಭಕ್ತ್ಯಾ ಕೃತಾಪಿ ಮಾಂಧಾತಃ**
**ಪುಣ್ಯಂ ಹಂತಿ ಪುರಾಕೃತಮ್**

**ಗೌರೀ ವಿನಾಯಕೋಪೇತಾ**
**ರೋಹಿಣೀ ಬುಧಸಂಯುತಾ**
**ವಿನಾಪಿ ರೋಹಿಣೀಯೋಗಾತ್**
**ಪುಣ್ಯಕೋಟಿಪ್ರದಾ ಸದಾ**

ದ್ವಿತೀಯಾ ವಿದ್ಧವಾದ ತೃತೀಯಾದಂದು ಅಕ್ಷಯತೃತೀಯಾದ ಅಚರಣೆ ಮಾಡಿದರೆ, ಹಿಂದೆ ಮಾಡಿದ ಪುಣ್ಯವೂ ವಿನಾಶವಾಗುತ್ತದೆ.

ಈ ವರ್ಷ — ವಿಲಂಬಿ ಸಂವತ್ಸರದಲ್ಲಿ — ಅಕ್ಷಯತೃತೀಯಾಗೆ ಕೃತ್ತಿಕಾಯೋಗ ಒದಗಿ ಬಂದಿದೆ. ಹೀಗಾಗಿ ವಿಶೇಷವಾದ ಸತ್ಕರ್ಮಗಳನ್ನು ಮಾಡಿ ಹರಿಪ್ರೀತಿಯನ್ನು ಸಂಪಾದಿಸಬೇಕು.

## ಕೊಳ್ಳುವದರ ಉಲ್ಲೇಖ ಶಾಸ್ತ್ರದಲ್ಲಿಲ್ಲ

ಈ ದಿವಸ ಬಂಗಾರವನ್ನು ಬೆಳ್ಳಿಯನ್ನು ವಾಹನವನ್ನು ಕೊಳ್ಳುವ ಪದ್ಧತಿ ಇತ್ತೀಚಿಗೆ ಬೆಳೆದು ಬಿಟ್ಟಿದೆ.

ಶಾಸ್ತ್ರಗಳಲ್ಲಿ ಈ ಕುರಿತು ಎಲ್ಲಿಯೂ ಉಲ್ಲೇಖವಿಲ್ಲ.

ನಮ್ಮ ಶಾಸ್ತ್ರ ಎಂದಿಗೂ ಪ್ರಾಪಂಚಿಕ ಸಂಪತ್ತಿನ ಶೇಖರಣೆಯನ್ನು ವಿಧಿಸುವದಿಲ್ಲ. ಅದರಲ್ಲಿಯೂ ಬ್ರಾಹ್ಮಣರಿಗೆ ತಮ್ಮ ಆವಶ್ಯಕತೆಗಿಂತ ಮೀರಿದ ಸಂಪತ್ತಿನ ಶೇಖರಣೆ ಹಿತವನ್ನುಂಟು ಮಾಡುವದಿಲ್ಲ, ಅನರ್ಥವನ್ನೇ ಉಂಟು ಮಾಡುತ್ತದೆ ಎಂದು ಮಹಾಭಾರತ ತಿಳಿಸುತ್ತದೆ —

**“ಅನರ್ಥೋಽಯಂ ಬ್ರಾಹ್ಮಣಸ್ಯ**
**ಯದ್ ವಿತ್ತನಿಚಯೋ ಮಹಾನ್”**

ಎಂದು. ಜೀವನಕ್ಕೆ ಎಷ್ಟು ಆವಶ್ಯಕವೋ ಅಷ್ಟನ್ನು ಮಾತ್ರ ಬಯಸಬೇಕು, ಅದಕ್ಕಾಗಿ ಮಾತ್ರ ಪ್ರಯತ್ನ ಪಡಬೇಕು, ಸಂಪತ್ತಿನ ಹಿಂದೆ ಹೋಗಬಾರದು ಎನ್ನುವದು ಶಾಸ್ತ್ರ ಕಲಿಸುವ ಪಾಠ.

ಹೀಗಾಗಿ, ಅಕ್ಷಯತೃತೀಯಾದಂದು ಬೆಳ್ಳಿ, ಬಂಗಾರ, ವಾಹನ ಮುಂತಾದವನ್ನು ಕೊಂಡರೆ ಅಕ್ಷಯವಾಗುತ್ತದೆ ಎನ್ನುವದಕ್ಕೆ ಯಾವ ಆಧಾರವೂ ಇಲ್ಲ.

ಮತ್ತು, ಈ ದಿವಸವೇ ದ್ರೌಪದಿಯ ಸೀರೆ ಅಕ್ಷಯವಾಯಿತು, ಸೀತೆಗೆ ಅಗ್ನಿಪರೀಕ್ಷೆಯಾಯಿತು ಮುಂತಾಗಿ ಕಥೆಗಳನ್ನು ಹಬ್ಬಿಸಿದ್ದಾರೆ. ಇವಕ್ಕೂ ಸಹ ಯಾವ ಆಧಾರವಿಲ್ಲ. ಪ್ರಮಾಣವಿದ್ದಲ್ಲಿ ಅವಶ್ಯವಾಗಿ ಒಪ್ಪೋಣ. ಒಪ್ಪಲೇಬೇಕು. ಆದರೆ ಪ್ರಮಾಣವಿಲ್ಲದೆ, ಕೇವಲ ಕಟ್ಟುಕಥೆಗಳನ್ನು ನಂಬತಕ್ಕದ್ದಲ್ಲ.

## ಗಂಗಾಸ್ನಾನದಿಂದ ಸರ್ವಪಾಪವಿನಾಶ

ಅಕ್ಷಯತೃತೀಯಾದಂದು ಗಂಗಾನದಿಯಲ್ಲಿ ಸ್ನಾನ ಮಾಡಿದರೆ ಸಕಲ ಪಾಪಗಳೂ ವಿನಾಶವಾಗುತ್ತವೆ.

**ವೈಶಾಖೇ ಶುಕ್ಲಪಕ್ಷೇ ತು**
**ತೃತೀಯಾಯಾಂ ತಥೈವ ಚ**
**ಗಂಗಾತೋಯೇ ನರಃ ಸ್ನಾತ್ವಾ**
**ಮುಚ್ಯತೇ ಸರ್ವಕಿಲ್ಬಿಷೈಃ**

ಸಾಧ್ಯವಿದ್ದಾಗ ಗಂಗಾಯಾತ್ರೆಗೆ ಹೋಗಬೇಕು. ಸಾಧ್ಯವಿಲ್ಲದೇ ಇದ್ದಾಗ ಮಹಾನದಿಗಳ ಸ್ನಾನಕ್ಕೆ ಹೋಗಬೇಕು. ಅದೂ ಸಾಧ್ಯವಿಲ್ಲದಿದ್ದಲ್ಲಿ ಮನೆಯಲ್ಲಿಯೇ ವಿಶೇಷವಾಗಿ ಗಂಗೆಯ ಸ್ಮರಣೆಯನ್ನು ಮಾಡಿ ಸ್ನಾನವನ್ನು ಮಾಡಬೇಕು.

ನಂದಿನೀ, ನಲಿನೀ, ಸೀತಾ, ಮಾಲಿನೀ, ಮಲಾಪಹಾ, ವಿಷ್ಣುಪಾದಾಬ್ಜಸಂಭೂತಾ, ಗಂಗಾ, ತ್ರಿಪಥಗಾಮಿನೀ, ಭಾಗೀರಥೀ, ಭೋಗವತೀ, ಜಾಹ್ನವೀ, ತ್ರಿದಶೇಶ್ವರೀ ಎಂಬ ಗಂಗೆಯ ಹನ್ನೆರಡು ಹೆಸರುಗಳನ್ನು ಸ್ನಾನಕಾಲದಲ್ಲಿ ತಪ್ಪದೇ ಜಪಿಸಬೇಕು.

## ಸಮುದ್ರಸ್ನಾನದಿಂದ ಗೋದಾನ-ಭೂದಾನಗಳ ಫಲ

ಅಕ್ಷಯ ತೃತೀಯಾ ತ್ರೇತಾಯುಗ ಆರಂಭವಾದ ದಿವಸ. ಹೀಗಾಗಿ ಇದನ್ನೂ ಪರ್ವಕಾಲಗಳಲ್ಲಿ ಗ್ರಹಣ ಮಾಡುತ್ತಾರೆ.

ಈ ದಿವಸ ಸಮುದ್ರಸ್ನಾನ ಮಾಡುವದರಿಂದ, ಕುರುಕ್ಷೇತ್ರದಲ್ಲಿ ಸಾವಿರ ಗೋದಾನಗಳನ್ನು ಮಾಡಿದರೆ ಯಾವ ಫಲ ಉಂಟಾಗುತ್ತದೆಯೋ ಆ ಫಲವನ್ನೂ, ಭೂದಾನದ ಫಲವನ್ನೂ ಪಡೆಯುತ್ತೇವೆ.

**ಯುಗಾದೌ ತು ನರಃ ಸ್ನಾತ್ವಾ**
**ವಿಧಿವಲ್ಲವಣೋದಧೌ**
**ಗೋಸಹಸ್ರಪ್ರದಾನಸ್ಯ**
**ಕುರುಕ್ಷೇತ್ರೇ ಫಲಂ ಹಿ ಯತ್**
**ತತ್ಫಲಂ ಲಭತೇ ಮರ್ತ್ಯೋ**
**ಭೂಮಿದಾನಸ್ಯ ಚ ಧ್ರುವಮ್**

ಹೀಗಾಗಿ ಪ್ರಯತ್ನಪಟ್ಟು ಸಮುದ್ರಸ್ನಾನವನ್ನು ಮಾಡಬೇಕು. ಸಾಧ್ಯವಿಲ್ಲದಿದ್ದಲ್ಲಿ ಸ್ನಾನಕಾಲದಲ್ಲಿ ಸಮುದ್ರಗಳ ಸ್ಮರಣೆಯನ್ನಾದರೂ ಮಾಡಬೇಕು.

## ಪುಷ್ಪಾರ್ಚನೆ ಧೂಪಸಮರ್ಪಣೆ

ಅಕ್ಷಯತೃತೀಯಾದಂದು ಶ್ರೀಹರಿಯ ಪೂಜೆಯನ್ನು ಮಾಡುವಾಗ ವಿಶೇಷವಾಗಿ ಪುಷ್ಪಾರ್ಚನೆಯನ್ನು ಮಾಡಬೇಕು.

**ವೈಶಾಖಸ್ಯ ತೃತೀಯಾಯಾಂ**
**ಶ್ರೀಸಮೇತಂ ಜಗದ್ಗುರುಮ್**
**ನಾರಾಯಣಂ ಪೂಜಯೇಚ್ಚ**
**ಪುಷ್ಪಧೂಪವಿಲೇಪನೈಃ**

ಒಂದೊಂದು ಹೂವಿನಲ್ಲಿ ಒಂದೊಂದು ರೀತಿಯ ಪರಿಮಳ. ವಿಷ್ಣುಸಹಸ್ರನಾಮವನ್ನು ಪಠಿಸುತ್ತ ಆ ಸುಗಂಧಭರಿತ ಹೂಗಳಿಂದ ಶ್ರೀಹರಿಯ ಅರ್ಚನೆಯನ್ನು ಮಾಡುವದು ಜೀವನಕ್ಕೆ ಸಾರ್ಥಕ್ಯವನ್ನು ನೀಡುವ, ಜೀವಕ್ಕೆ ಅಪರಿಮಿತ ಆನಂದವನ್ನು ನೀಡುವ ಮಹಾಸತ್ಕರ್ಮ.

ಗಂಡ ಹೆಂಡತಿಯರ ಮಧ್ಯದಲ್ಲಿ ಮೇಲಿಂದ ಮೇಲೆ ಜಗಳವಾಗುತ್ತಿದ್ದಲ್ಲಿ, ಮನೆಯಲ್ಲಿ ಉದ್ವಿಗ್ನತೆಯ ವಾತಾವರಣವಿದ್ದಲ್ಲಿ, ಕುಟುಂಬದ ಸದಸ್ಯರ ಮಧ್ಯದಲ್ಲಿ ವೈಮನ್ಯಸ್ಯವಿದ್ದಲ್ಲಿ ಈ

ಪುಷ್ಪಾರ್ಚನೆಯಿಂದ ಅವೆಲ್ಲವೂ ಪರಿಹಾರವಾಗುತ್ತದೆ. ಮನೆಯಲ್ಲಿ ನೆಮ್ಮದಿ, ಪ್ರೀತಿ, ಸಂತೋಷಗಳು ನೆಲೆಯಾಗುತ್ತವೆ.

ಹಾಗೆಯೇ ಸುಗಂಧಭರಿತವಾದ ದಶಾಂಗ ಮತ್ತು ತುಪ್ಪವನ್ನು ಹಾಕಿ ಶ್ರೀಹರಿಗೆ ಧೂಪಾರತಿಯನ್ನು ಮಾಡಬೇಕು.

## ಗಂಧಸಮರ್ಪಣೆಯಿಂದ ಹರಿಲೋಕಪ್ರಾಪ್ತಿ

ಅಕ್ಷಯತೃತೀಯಾದಂದು ಮಾಡಲೇಬೇಕಾದ ಮಹತ್ತರ ಸತ್ಕರ್ಮ ಶ್ರೀಹರಿ-ದೇವತಾ-ಗುರುಗಳಿಗೆ ಗಂಧಸಮರ್ಪಣೆ.

ಈ ದಿವಸ ಪರಮಾತ್ಮನಿಗೆ ಗಂಧಸಮರ್ಪಣೆ ಮಾಡುವದರಿಂದ ಶ್ರೀಹರಿಲೋಕದ ಪ್ರಾಪ್ತವಾಗುವದು ಸುನಿಶ್ಚಿತ ಎಂದು ಶಾಸ್ತ್ರ ತಿಳಿಸುತ್ತದೆ —

**ಯಃ ಕರೋತಿ ತೃತೀಯಾಯಾಂ**
**ಕೃಷ್ಣಂ ಚಂದನಲೇಪಿತಮ್**
**ವೈಶಾಖಸ್ಯ ಸಿತೇ ಪಕ್ಷೇ**
**ಸ ಯಾತ್ಯಚ್ಯುತಮಂದಿರಮ್**

ಅಕ್ಷಯತೃತೀಯಾದಂದು ಬೆಳಗಿನ ಜಾವವೇ ಎದ್ದು ಎಷ್ಟು ಸಾಧ್ಯವೋ ಅಷ್ಟು ಗಂಧವನ್ನು ತೇಯಬೇಕು. ಗಂಧೋದಕವನ್ನೂ ಸಿದ್ಧ ಪಡಿಸಿಕೊಳ್ಳಬೇಕು.

ಶ್ರೀಗಂಧದ ಕೊರಡಿನಿಂದ ಗಂಧವನ್ನು ತೇಯುವಾಗ ಪಚ್ಚಕರ್ಪೂರ, ಏಲಕ್ಕಿ, ಕಸ್ತೂರಿ,

ಕೇಸರಿಗಳನ್ನು ಹಾಕಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ತುಳಸೀಕಡ್ಡಿಯ ಕಾಷ್ಠದಿಂದ ತೇಯಬೇಕು. ತುಲಸೀಗಂಧವಿರುವ ಶ್ರೀಗಂಧದ ಸಮರ್ಪಣೆಯಿಂದ ಶ್ರೀಹರಿ ಪರಮಪ್ರೀತನಾಗುತ್ತಾನೆ.

ಆ ಗಂಧೋದಕದಿಂದ ದೇವರಿಗೆ ಅಭಿಷೇಕ ಮಾಡಿ, ಆ ಗಂಧದಿಂದ  ಸಾಲಿಗ್ರಾಮಗಳಿಗೆ, ಪ್ರತಿಮೆಗಳಿಗೆ ಅನುಲೇಪನವನ್ನು ಮಾಡಿದರೆ ಗಳಿಸುವ ಪುಣ್ಯವನ್ನು ಲೆಕ್ಕ ಹಾಕಲು ಸಾಧ್ಯವಿಲ್ಲ.

ನಾವಿರುವದು ಮಾನುಷ ಜನ್ಮದಲ್ಲಿ. ಮಲಗೆದ್ದರೆ ಮೈಯೆಲ್ಲ ಮಲ. ಬಾಯಿ, ಕಣ್ಣು, ಕಿವಿ ಮುಂತಾಗಿ ಇಡಿಯ ಮೈಯಲ್ಲಿ ಹೊಲಸು ತುಂಬಿರುವ ದೇಹವಿದು. ಆದರೆ ನಮ್ಮೊಳಗಿನ ಸ್ವರೂಪದೇಹ ಹಾಗಿಲ್ಲ. ಪರಿಶುದ್ಧವಾದ ಅಮಲವಾದ ಸುಗಂಧಯುಕ್ತವಾದ ಶರೀರವದು. ನಮ್ಮ ಆ ಶರೀರದ ಅಭಿವ್ಯಕ್ತಿಯನ್ನು ಪಡೆದುಕೊಳ್ಳಬೇಕಾಗಿದೆ. ಪಡೆಯಬೇಕಾದರೆ ಹರಿಯರ್ಚನೆಯನ್ನು ಬಿಟ್ಟರೆ ಬೇರೆ ದಾರಿಯಿಲ್ಲ. ಸದಾ ಸುಗಂಧಮಯಯನಾದ

ಶ್ರೀಲಕ್ಷ್ಮೀನಾರಾಯಣನಿಗೆ ಗಂಧೋದಕದ ಅಭಿಷೇಕವನ್ನು ಮಾಡಿದಲ್ಲಿ ಶ್ರೀಹರಿ ನಮ್ಮ ಸ್ವರೂಪದೇಹದ ಅಭಿವ್ಯಕ್ತಿಯನ್ನು ಕರುಣಿಸುತ್ತಾನೆ. ಅರ್ಥಾತ್, ಅದಕ್ಕೆ ಸಾಧನವಾದ ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಶ್ರೀಹರಿ ಅನುಗ್ರಹಿಸುತ್ತಾನೆ.

ದೇವರಿಗೆ ಸಮರ್ಪಿಸಿದ ಗಂಧವನ್ನು ವಾಯುದೇವರಿಗೆ, ರುದ್ರಾದಿ ದೇವತೆಗಳಿಗೂ ಸಮರ್ಪಿಸಬೇಕು. ಆ ನಂತರ ಗುರುಗಳಿಗೆ ಸಮರ್ಪಿಸಬೇಕು.

ಮಂತ್ರಾಲಯಪ್ರಭುಗಳಿಗೆ ಈ ದಿವಸ ಗಂಧದ ಅಲಂಕಾರವನ್ನೇ ಮಾಡುತ್ತಾರೆ. ಶ್ರೀ ವಾದೀಂದ್ರತೀರ್ಥಶ್ರೀಪಾದಂಗಳವರು ಗುರುಗುಣ ಸ್ತವನವನ್ನು ರಚನೆ ಮಾಡಿ ಶ್ರೀ ಗುರುರಾಜರಿಗೆ ಸಮರ್ಪಣೆ ಮಾಡಿದ್ದು ಇದೇ ದಿವಸ ಎಂದು ಐತಿಹ್ಯ ತಿಳಿಸುತ್ತದೆ.

ಶ್ರೀ ರಾಘವೇಂದ್ರತೀರ್ಥಗುರುಸಾರ್ವಭೌಮರ ಗ್ರಂಥಗಳ ಕಂಪು ಈ ಘೋರ ಕಲಿಯುಗದಲ್ಲಿಯೂ ಸಜ್ಜನರನ್ನು ಸುಖವಾಗಿರಿಸಿದೆ. ಅಂತಹ ಅವರ

ಅದ್ಭುತ ಗ್ರಂಥಗಳ ಮಾಹಾತ್ಮ್ಯವನ್ನು ತಿಳಿಹೇಳಿದ ಶ್ರೀ ವಾದೀಂದ್ರತೀರ್ಥರ ಗುರುಗುಣಸ್ತವನದ ಪಾರಾಯಣವನ್ನು ಮಾಡಿ ರಾಯರಿಗೆ ಸಮರ್ಪಿಸಬೇಕು. ಮತ್ತು, ಮನೆಯಲ್ಲಿ ರಾಯರ, ಗುರುಗಳ ವೃಂದಾವನಗಳಿದ್ದರೆ ಅವಕ್ಕೆ ಗಂಧದ ಲೇಪನವನ್ನು ಮಾಡಬೇಕು.

## ಉದಕುಂಭದಾನದಿಂದ ಪಿತೃಗಳಿಗೆ ಅಕ್ಷಯತೃಪ್ತಿ

ವೈಶಾಖ ಬಿಸಿಲಿನ ಮಾಸ. ಎಷ್ಟು ನೀರು ಕುಡಿದರೂ ಸಾಲದು. ಹೀಗಾಗಿ ಈ ಮಾಸದಲ್ಲಿ ಪ್ರಪಾದಾನ ಸರ್ವಶ್ರೇಷ್ಠವಾದದ್ದು. ಅಂದರೆ ದಾರಿದಾರಿಯಲ್ಲಿ ಜನರಿಗೆ, ಪ್ರಾಣಿ, ಪಕ್ಷಿಗಳಿಗೆ ನೀರು ಕುಡಿಯಲು ವ್ಯವಸ್ಥೆ ಮಾಡಬೇಕು. ಅದರಿಂದ ಉತ್ತಮ ವೈಷ್ಣವಜನ್ಮದ ಪ್ರಾಪ್ತಿಯಾಗುತ್ತದೆ.

ಅಷ್ಟು ಮಾಡಲು ಸಾಧ್ಯವಿಲ್ಲದವರು ಅಕ್ಷಯತೃತೀಯಾದಂದು ಒಂದು ತಂಬಿಗೆ ನೀರನ್ನಾದರೂ ದಾನ ಮಾಡಬೇಕು. ಇದರಿಂದ ನಮ್ಮ ಮನಸ್ಸಿನ ಎಲ್ಲ ಅಪೇಕ್ಷೆಗಳೂ

ಪೂರ್ಣವಾಗುತ್ತವೆ. ಮತ್ತು ನಮ್ಮ ಪಿತೃಗಳು ಸಂತುಷ್ಟರಾಗುತ್ತಾರೆ.

ಈ ಉದಕುಂಭದಾನಕ್ಕೆ ಮಂತ್ರವನ್ನೂ ಶಾಸ್ತ್ರ ತಿಳಿಸುತ್ತದೆ —

**ಏಷ ಧರ್ಮಘಟೋ ದತ್ತೋ**
**ಬ್ರಹ್ಮವಿಷ್ಣುಶಿವಾತ್ಮಕಃ**
**ಅಸ್ಯ ಪ್ರದಾನಾತ್ ಸಕಲಾ**
**ಮಮ ಸಂತು ಮನೋರಥಾಃ**

**ಏಷ ಧರ್ಮಘಟೋ ದತ್ತೋ**
**ಬ್ರಹ್ಮವಿಷ್ಣುಶಿವಾತ್ಮಕಃ**
**ಅಸ್ಯ ಪ್ರದಾನಾತ್ ತುಷ್ಯಂತು**
**ಪಿತರೋಥ ಪಿತಾಮಹಾಃ**

ತುಂಬ ದಿವಸದಿಂದ ಈಡೇರದ ಬಯಕೆಯಿದ್ದರೆ, ಅದು ಪೂರ್ಣವಾಗಲಿ ಎಂದು ಬಯಸಿ, “ತ್ರಿಮೂರ್ತಿಗಳ ಸನ್ನಿಧಾನವಿರುವ ಈ ನೀರು ತುಂಬಿದ ಪಾತ್ರೆಯನ್ನು ದಾನ ಮಾಡುತ್ತಿದ್ದೇನೆ, ನನ್ನ ಮನಸ್ಸಿನ ಅಪೇಕ್ಷೆಗಳು ಈಡೇರಲಿ, ನನ್ನ ಪೂರ್ವಜರು ತೃಪ್ತರಾಗಲಿ” ಎಂದು ಸಂಕಲ್ಪಿಸಿ

ದಾನವನ್ನು ಮಾಡಬೇಕು. ಈ ದಿವಸ ಪಾನಕ ಮಜ್ಜಿಗೆಗಳನ್ನು ನೀಡುವದು ಇನ್ನೂ ಹೆಚ್ಚಿನ ಫಲಪ್ರದ.

ನೀರು ಕುಡಿಯುವ ತಂಬಿಗೆಯೊಂದಿಗೆ ದಾನ ಮಾಡುವದು ಉದಕುಂಭದಾನ. ಕೇವಲ, ನೀರು, ಮಜ್ಜಿಗೆ, ಪಾನಕಗಳನ್ನು ನೀಡುವದು ಜಲದಾನ.

## ತಿಲತರ್ಪಣ ಮತ್ತು ತಿಲಕುಂಭದಾನ

ಮೇಲೆ ಹೇಳಿದ ಉದಕುಂಭದಾನವನ್ನು ತಂದೆ ಇರುವವರೂ ಮಾಡಬಹುದು. ತಂದೆ ಇಲ್ಲದವರು ನೀರಿನೊಂದಿಗೆ ಎಳ್ಳನ್ನೂ ದಾನ ಮಾಡಬೇಕು. ಮತ್ತು ತಿಲತರ್ಪಣವನ್ನು ನೀಡಬೇಕು.

ತಿಲತರ್ಪಣವನ್ನು ನೀಡಿದಲ್ಲಿ ರಾತ್ರಿ ಭೋಜನ ಮಾಡುವಂತಿಲ್ಲ. ಫಲಾಹಾರ ಸ್ವೀಕರಿಸಬಹುದು.

ಪಾತ್ರೆಯಲ್ಲಿ ಶುದ್ಧ ಜಲವನ್ನು ಹಾಕಿ, ಕೇಸರಿಯನ್ನು ಹಾಕಿ ಸುಗಂಧಮಯವನ್ನಾಗಿ ಮಾಡಿ, ಎಳ್ಳು ಫಲ ತಾಂಬೂಲಗಳೊಂದಿಗೆ ಅವೆಲ್ಲವನ್ನೂ ಹರಿಗರ್ಪಿಸಿ

ಆ ನಂತರ ವಿಷ್ಣುಭಕ್ತರಾದ ಸಜ್ಜನ ಬ್ರಾಹ್ಮಣರಿಗೆ ಕೆಳಗಿನ ಮಂತ್ರವನ್ನು ಹೇಳುತ್ತ ನೀಡಬೇಕು —

ಗಂಧೋದಕತಿಲೈರ್ಮಿಶ್ರಂ
ತಿಲಕುಂಭಂ ಫಲಾನ್ವಿತಮ್ ।
ಪಿತೃಭ್ಯಃ ಸಂಪ್ರದಾಸ್ಯಾಮಿ
ಅಕ್ಷಯ್ಯಮುಪತಿಷ್ಠತು

## ಬ್ರಾಹ್ಮಣ ಸಮಾರಾಧನೆ

ಮನೆಯಲ್ಲಿ ಶುದ್ಧವಾದ ಕ್ರಮದಲ್ಲಿ ಅಡಿಗೆಯನ್ನು ಮಾಡಿಸಿ, ಹರಿ-ಗುರುಗಳಿಗರ್ಪಿಸಿ, ಕನಿಷ್ಠ ಪಕ್ಷ ಒಬ್ಬ ದಂಪತಿ ಅಥವಾ ಒಬ್ಬ ಬ್ರಾಹ್ಮಣ, ಮುತ್ತೈದೆಗಾದರೂ ಆ ದಿವಸ ಭೋಜನವನ್ನು ನೀಡಬೇಕು. ಶ್ರೀಹರಿ ಅದನ್ನು ಅನಂತವಾಗಿ ಮಾಡುತ್ತಾನೆ.

## ಗ್ರಂಥದಾನ, ಶಾಸ್ತ್ರಾಧ್ಯಯನ

ಅಕ್ಷಯತೃತೀಯಾದ ದಾನಾದಿಗಳಿಂದ ಈಡೇರದ ಅಪೇಕ್ಷೆಗಳೂ ಈಡೇರುತ್ತವೆ ಎಂದು ಶಾಸ್ತ್ರ ಸಾರಿಸಾರಿ ಹೇಳುತ್ತದೆ. ಶಾಸ್ತ್ರದ ಅಧ್ಯಯನಕ್ಕೆ

ತೊಂದರೆಯಾಗುತ್ತಿದ್ದಲ್ಲಿ, ಧರ್ಮದ ಆಚರಣೆಗೆ ವಿಘ್ನ ಒದಗಿ ಬರುತ್ತಿದ್ದಲ್ಲಿ ಈ ದಿವಸ ವಿಶೇಷವಾಗಿ ಗ್ರಂಥಗಳ ದಾನವನ್ನು ಮಾಡಬೇಕು. ಜ್ಞಾನಕಾರ್ಯವನ್ನು ಮಾಡಿಸಬೇಕು. ಸ್ವಯಂ ಜ್ಞಾನಸಂಪಾದನೆಯನ್ನು ಮಾಡಬೇಕು.

ಶಾಸ್ತ್ರದ ಒಂದು ವಾಕ್ಯವನ್ನಾದರೂ ಶ್ರದ್ಧೆಯಿಂದ ಕಲಿತು ಈ ದಿವಸ ಹರಿಗರ್ಪಿಸಿದಲ್ಲಿ ಅದನ್ನು ಅನಂತ ಮಡಿ ಮಾಡಿ ಶ್ರೀಹರಿ ನಮಗೆ ಕರುಣಿಸುತ್ತಾನೆ. ಹೀಗಾಗಿ ಯಾವುದನ್ನು ಮಾಡಿದರೂ ಬಿಟ್ಟರೂ ಶಾಸ್ತ್ರದ ಅಧ್ಯಯನ, ನಾಮಸ್ಮರಣ, ಸಂಕೀರ್ತನಗಳನ್ನು ಸರ್ವಥಾ ಬಿಡಬಾರದು.

ಸಾಮಾನ್ಯವಾಗಿ ಅಕ್ಷಯತೃತೀಯಾ ದಿವಸವೇ ಪರಶುರಾಮಜಯಂತಿ ಬಂದೊದಗುತ್ತದೆ[2]. ಬ್ರಾಹ್ಮಣರ ರಕ್ಷಣೆಗಾಗಿ ಅವತರಿಸಿಬಂದ

---

[2] ಪರಶುರಾಮಜಯಂತಿಗೆ ತೃತೀಯಾ ಪ್ರದೋಷವ್ಯಾಪಿನಿಯಾಗಿರಬೇರು. ತೃತೀಯಾ ಆಚರಣೆಗೆ ಪೂರ್ವಾಹ್ಣವ್ಯಾಪಿನಿಯಾಗಿರಬೇಕು. ಹೀಗಾಗಿ ಕೆಲವು ಸಂದರ್ಭದಲ್ಲಿ ಇವು ಒಂದರನಂತರ ಒಂದು ಬರುತ್ತವೆ. ಈ ಹೇಮಲಂಬವತ್ಸರದಲ್ಲಿ ಶುಕ್ರವಾರದಂದು ಪರಶುರಾಮಜಯಂತಿ ಮತ್ತು ಶನಿವಾರದಂದು ಅಕ್ಷಯತೃತೀಯಾ.

ಪರಶುರಾಮದೇವರು ಆವಿರ್ಭವಿಸಿದ್ದು ಸೂರ್ಯಾಸ್ತದ  ನಂತರ. ಹೀಗಾಗಿ ಸಂಜೆ ದೇವರ ಮುಂದೆ ದೀಪಗಳನ್ನು ಬೆಳಗಿಸಿ ಸಂಕೀರ್ತನೆಯನ್ನು ಮಾಡಬೇಕು.

ಯಾವ ದಾನ, ತಪಸ್ಸುಗಳಿಂದಲೂ ದೊರೆಯದ ಪುಣ್ಯ, ನಾಮಸ್ಮರಣೆ ಸಂಕೀರ್ತನೆ ನಮಸ್ಕಾರಗಳಿಂದ ದೊರೆಯುತ್ತವೆ. ಹೀಗಾಗಿ ತಪ್ಪದೇ ಅವುಗಳ ಆಚರಣೆಯನ್ನು ಮಾಡಬೇಕು.

ಅಕ್ಷಯತೃತೀಯಾದಂದು ಬೆಳ್ಳಿ ಬಂಗಾರವನ್ನು ಕೂಡಿಡುವ ಅರ್ಥಹೀನ ಪದ್ಧತಿಯನ್ನು ಆಚರಿಸದೇ, ಸ್ನಾನ, ಪೂಜೆ, ಅರ್ಚನೆ, ಗಂಧಸಮರ್ಪಣೆ, ದಾನ, ಅಧ್ಯಯನ, ಅಧ್ಯಾಪನ, ನಾಮಸಂಕೀರ್ತನ, ನಮಸ್ಕಾರ, ಹರಿಸ್ಮರಣೆಗಳಿಂದ ನಿಮ್ಮೆಲ್ಲರ ಜೀವನ ಸಾರ್ಥಕವಾಗಲಿ, ಬರುವ ಫಲ ಅಕ್ಷಯವಾಗಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491